
ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,
2021-22
ಪರ್ಯಾಯ ಶೈಕ್ಷಣಿಕ ಯೋಜನೆ
ವಿಷಯ:- ಗಣಿತ
ತರಗತಿ:-3ನೇ ತರಗತಿ
ರಚನೆಗೆ ಸಹಕಾರ:- ಮೂಡಿಗೆರೆ ಶೈಕ್ಷಣಿಕ ವಲಯ
ಪರಿಕಲ್ಪನೆ ಮತ್ತು ಮಾರ್ಗದರ್ಶನ
ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ರಾಮನಹಳ್ಳಿ, ಚಿಕ್ಕಮಗಳೂರು
Design by Sathyaprakash R M Art Teacher

# ಪರಿವಿಡಿ


| ಕ್ರ. ಸಂ. | ಕಲಿಕಾಂಶ ವಿವರ | ಪುಟ ಸಂಖ್ಯೆ |
|---|---|---|
| 01. | ಲಕ್ಷಣಗಳನ್ನು ಆಧರಿಸಿ ವಿಂಗಡಿಸುವುದು | 3–4 |
| 02. | ಎಡ ಬಲ, ಹಿಂದೆ ಮುಂದೆ ಮಧ್ಯೆ, ಮೇಲೆ ಕೆಳಗೆ | 5–8 |
| 03. | ಹೆಚ್ಚು ಕಡಿಮೆ ಸಮ, ಚಿಕ್ಕದು ದೊಡ್ಡದು | 9–11 |
| 04. | ದಶಕ ರಹಿತ ಸಂಕಲನ ಮತ್ತು ವ್ಯವಕಲನ (ಪುನರ್‌ಮನನ) | 12–13 |
| 05. | 100 ರ ಕಲ್ಪನೆ ಮತ್ತು ಸ್ಥಾನ ಬೆಲೆ | 14–16 |
| 06. | 0 ಯಿಂದ 500 ರ ಎಣಿಕೆ ಮತ್ತು ಬರವಣಿಗೆ | 17–19 |
| 07. | 0–500 ಸಂಖ್ಯೆಗಳ ಸ್ಥಾನ ಬೆಲೆ | 20–21 |
| 08. | ಹಿಂದೆ, ಮುಂದೆ, ಮಧ್ಯೆ (ವ್ಯಾಪ್ತಿ 0–500) | 22–24 |
| 09. | ಹೆಚ್ಚು–ಕಡಿಮೆ–ಸಮ (ವ್ಯಾಪ್ತಿ 0–500) | 25–27 |
| 10. | ಸಂಕಲನ (ದಶಕ ರಹಿತ) (ಮೊತ್ತ 500 ಕ್ಕೆ ಮೀರದಂತೆ) | 28–31 |
| 11. | ದಶಕ ಸಹಿತ ಸಂಕಲನ | 32 |
| 12. | ವ್ಯವಕಲನ 0 ಯಿಂದ 500 ರವರಗೆ (ದಶಕ ರಹಿತ) | 32–34 |
| 13. | ದಶಕ ಸಹಿತ ವ್ಯವಕಲನ. | 35–38 |
| 14. | ಸ್ಥಾನಬೆಲೆ ಎಣಿಕೆ ಬರವಣಿಗೆ (500–999) | 39–44 |


DIET

# 2021–22ನೇ ಸಾಲಿನ ಪರ್ಯಾಯ ಶೈಕ್ಷಣಿಕ ಯೋಜನೆ


## ಲಕ್ಷಣಗಳನ್ನು ಆಧರಿಸಿ ವಿಂಗಡಿಸುವುದು.

### ಕಲಿಕಾಂಶ:

1. ಒಂದೇ ಆಕಾರದ ಚಿತ್ರಗಳನ್ನು ಒಂದೇ ರೀತಿಯ ಬಣ್ಣ ಹಚ್ಚುವ ಮೂಲಕ ವಿಂಗಡಿಸುವುದು.



ಹಸಿರು ನೀಲಿ ಕೆಂಪು ಹಳದಿ ಬಣ್ಣ ತುಂಬಿರಿ.



2. ಒಂದೇ ರೀತಿಯ ಹೋಲುವ ಚಿತ್ರಗಳನ್ನು ಹೊಂದಿಸಿರುವುದನ್ನು ಗಮನಿಸಿ.



ಪೆಂಗ್ವಿನ್, ಸಿಂಹ, ಗ್ಲೋಬ್ ಮತ್ತು ಗಡಿಯಾರ.


DIET CHIKK...

## **ಅಭ್ಯಾಸ ಚಟುವಟಿಕೆ**

### ಲಕ್ಷಣಗಳನ್ನು ಆಧರಿಸಿ ವಿಂಗಡಿಸುವುದು

1. **ನಿಮ್ಮ ಮನೆಯ ಹತ್ತಿರ ಸಿಗುವ ಕಲ್ಲುಗಳು, ಎಲೆಗಳು, ಹುಣಸೇ ಬೀಜಗಳು, ಕಡ್ಡಿಗಳು, ಗೋಧಿ, ವಿವಿಧ ಕಾಳುಗಳು ಮತ್ತು ತೊಗರಿ ಬೇಳೆಗಳನ್ನು ಸಂಗ್ರಹಿಸಿ, ನಂತರ ಒಟ್ಟು ಮಾಡಿ. ಸಂಗ್ರಹಿಸಿದ ವಸ್ತುಗಳನ್ನು ಅವುಗಳ ಲಕ್ಷಣಗಳಿಗೆ ಅನುಗುಣವಾಗಿ ವಿಂಗಡಿಸುವುದು.**

2. **ಸೂಚನೆ :– ಹೂವಿನ ಚಿತ್ರಕ್ಕೆ ಹಳದಿ ಬಣ್ಣ, ಸೇಬಿನ ಚಿತ್ರಕ್ಕೆ ಕೆಂಪು ಬಣ್ಣ, ಛತ್ರಿಗೆ ನೀಲಿ ಬಣ್ಣ ಹಾಗೂ ನಕ್ಷತ್ರಗಳಿಗೆ ಕೇಸರಿ ಬಣ್ಣ ಹಾಕಿರಿ.**



## ಕಲಿಕಾಂಶ: ಎಡ ಬಲ, ಹಿಂದೆ ಮುಂದೆ ಮಧ್ಯೆ, ಮೇಲೆ ಕೆಳಗೆ


**ಸೂಚನೆ:–**

1. **ಕೆಳಗಿನ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿರಿ.**
   ಚಿತ್ರದಲ್ಲಿ ಹಿಂದೆ ಮುಂದೆ ಮಧ್ಯೆ, ಎಡ ಬಲ, ಮೇಲೆ ಕೆಳಗೆ ಗುರ್ತಿಸಿರಿ.



ಚಿತ್ರದಲ್ಲಿ ಮನೆಯ ಎಡಭಾಗದಲ್ಲಿ ಗುಡಿಸಲು ಇದೆ, ಮನೆಯ ಬಲಭಾಗಲದಲ್ಲಿ ಮರ ಇದೆ. ಮರ ಮತ್ತು ಗುಡಿಸಲಿನ ಮಧ್ಯೆ ಮನೆ ಇದೆ. ಮರದ ಮೇಲೆ ಪಕ್ಷಿ ಇದೆ, ಮರದ ಕೆಳಗೆ ಇಲಿ ಇದೆ. ಮನೆಯ ಹಿಂದೆ ತೋಟವಿದೆ. ಮನೆಯ ಮುಂದೆ ನಾಯಿ ಇದೆ.

2. **ಚಿತ್ರ ನೋಡಿ ಎಡ ಬಲ, ಮೇಲೆ ಕೆಳಗೆ, ಮಧ್ಯದ ಸಂಖ್ಯೆ ಬರೆಯುವುದು.**



ಅ) ಮಧ್ಯದ ಮೀನಿನ ಸಂಖ್ಯೆ 36
ಆ) ಮಧ್ಯದ ಮೀನಿನ ಎಡಭಾಗದ ಸಂಖ್ಯೆ 37
ಇ) ಮಧ್ಯದ ಮೀನಿನ ಬಲಭಾಗದ ಸಂಖ್ಯೆ 35
ಈ) 35 ಮತ್ತು 37 ರ ಮಧ್ಯದ ಸಂಖ್ಯೆ 36
ಉ) ಮಧ್ಯದ ಮೀನಿನ ಮೇಲಿನ ಸಂಖ್ಯೆ 85
ಊ) 36 ರ ಕೆಳಗಿನ ಸಂಖ್ಯೆ 87.


3. ಕೆಳಗಿನ ಚಿತ್ರವನ್ನು ಗಮನಿಸಿರಿ.





**ಈ ಚಿತ್ರದಲ್ಲಿ ರಾಮ, ಸೋಮ, ಕಮಲ ವಿದ್ಯುತ್ ಬಿಲ್ ಪಾವತಿಸಲು ಸಾಲಿನಲ್ಲಿ ನಿಂತಿದ್ದಾರೆ. ರಾಮ ಮುಂದೆ ನಿಂತಿದ್ದಾನೆ. ಅವನಿಗೆ 55 ಸಂಖ್ಯೆ ನೀಡಿದ್ದಾರೆ. ಹಾಗಾದರೆ ರಾಮುವಿನ ಹಿಂದೆ ನಿಂತಿರುವ ಸೋಮುವಿಗೆ ಯಾವ ಸಂಖ್ಯೆ ಸಿಗುತ್ತದೆ? 56 ಅಲ್ಲವೇ! ಅದೇ ರೀತಿ ಸೋಮುವಿನ ಹಿಂದೆ ನಿಂತಿರುವ ಕಮಲಳ ಸಂಖ್ಯೆಯು 57 ಆಗುತ್ತದೆ.**

## ಅಭ್ಯಾಸ ಚಟುವಟಿಕೆ

**1. ಬಿಟ್ಟ ಸ್ಥಳ ತುಂಬಿರಿ.**









ಅ) ಹೂವಿನ ಬಲಕ್ಕಿರುವ ಸಂಖ್ಯೆ ______ .

ಆ) ಇಲಿ ಮತ್ತು ಬ್ಯಾಟ್‌ನ ಮಧ್ಯ ಇರುವ ಸಂಖ್ಯೆ ______

ಇ) ಹೂವಿನ ಎಡಕ್ಕಿರುವ ಸಂಖ್ಯೆ ______

**2. ಬಿಟ್ಟ ಸ್ಥಳ ತುಂಬಿರಿ.**




63 ರ ಮೇಲಿನ ಸಂಖ್ಯೆ____

62 ಮತ್ತು 64 ರ ಮಧ್ಯದ ಸಂಖ್ಯೆ ____

63 ರ ಕೆಳಗಿನ ಸಂಖ್ಯೆ ____

**3. ಈ ಕೆಳಗಿನ ಸೂಚನೆಯಂತೆ ಬಣ್ಣ ತುಂಬಿರಿ.**




* 84 ರ ಬಲಭಾಗದ ಸಂಖ್ಯೆಗೆ ಕೆಂಪು ಬಣ್ಣ ಹಚ್ಚು.

* 83 ರ ಎಡಭಾಗದ ಸಂಖ್ಯೆಗೆ ಕೇಸರಿ ಬಣ್ಣ ಹಾಕು.

* 84 ರ ಎಡಭಾಗದ ಸಂಖ್ಯೆಗೆ ನೀಲಿ ಬಣ್ಣ ಹಾಕು.

**4. ಹಿಂದೆ, ಮುಂದೆ, ಮಧ್ಯದ ಸಂಖ್ಯೆ ಬರೆಯಿರಿ.**

1) 36, ______, 38.

2) 92, 93, ______.

3) ______, 54, 55.

4) ______, 30, 31.

5) 68, 69, ______.

6) 39, ______, 41

## ಮೌಲ್ಯಮಾಪನ ಚಟುವಟಿಕೆ

1. ನಿನ್ನ ಈಗಿನ ವಯಸ್ಸಿನ ಹಿಂದಿನ ಸಂಖ್ಯೆ ಯಾವುದು?

_______________

2. ಮುಂದಿನ ವರ್ಷ ನಿನ್ನ ವಯಸ್ಸು ಎಷ್ಟು ಆಗುತ್ತದೆ?

_______________

3. 57 ರ ಮುಂದಿನ ಸಂಖ್ಯೆ ಎಷ್ಟು?

_______________

4. 79 ರ ಹಿಂದಿನ ಸಂಖ್ಯೆ ಎಷ್ಟು?

_______________

5. ನೀನು ಕೊಠಡಿಯ ಮಧ್ಯದಲ್ಲಿ ನಿಂತು ನಿನ್ನ ಎಡ ಬಲ ಮತ್ತು ಹಿಂದೆ ಮುಂದೆ ಇರುವ ವಸ್ತುಗಳನ್ನು ಹೆಸರಿಸಿ.

ಎಡಭಾಗ: _______________

ಬಲಭಾಗ: _______________

ಹಿಂದೆ: _______________

ಮುಂದೆ: _______________

6. ಕೆಳಗಿನ ಸಂಖ್ಯೆಗಳಿಗೆ ಹಿಂದಿನ, ಮುಂದಿನ, ಮಧ್ಯದ ಸಂಖ್ಯೆ ಬರೆಯಿರಿ.

1) 36, 37, ______


2) 31, ______ 33.

3) ______ 39, 40.

DIET CHIKKAMAGALURU

## ಕಲಿಕಾಂಶ : ಹೆಚ್ಚು ಕಡಿಮೆ ಸಮ, ಚಿಕ್ಕದು ದೊಡ್ಡದು.


**ಸೂಚನೆ:–** ಚಿತ್ರವನ್ನು ಗಮನಿಸಿ ಹೆಚ್ಚು, ಕಡಿಮೆ, ಸಮ, ಚಿಕ್ಕದು ದೊಡ್ಡದು ಗುರುತಿಸುವುದು.











## ಅಭ್ಯಾಸ ಚಟುವಟಿಕೆ

1. **ಸೂಚನೆ:–** ಈ ಕೆಳಗಿನ ಚಿತ್ರಗಳನ್ನು ಎಣಿಸಿ, ಸಂಖ್ಯೆ ಬರೆದು ದೊಡ್ಡ ಸಂಖ್ಯೆಗೆ ಸರಿ(✓) ಗುರುತು ಹಾಕು.



2. ಕೆಳಗಿನ ಚಿತ್ರಗಳನ್ನು ಗಮನಿಸಿ ಖಾಲಿ ಜಾಗಕ್ಕೆ ಸರಿಯಾದ ಸಂಖ್ಯೆಯನ್ನು ಬರೆಯಿರಿ.




ಹೆಚ್ಚು ☐ ಕಡಿಮೆ ☐

ಹೆಚ್ಚು ☐ ಕಡಿಮೆ ☐

| | | | | |
|---|---|---|---|---|
| 76 | 36 | 88 | 25 | 66 |

ಹೆಚ್ಚು ☐ ಕಡಿಮೆ ☐

3. ಈ ಕೆಳಗಿನ ಚಿತ್ರಗಳಲ್ಲಿ ಸಮ ಸಂಖ್ಯೆಗೆ ವೃತ್ತ ಹಾಕಿ:



## ಮೌಲ್ಯಮಾಪನ

**1. ಈ ಕೆಳಗಿನ ಸಂಖ್ಯೆಗಳಲ್ಲಿ ಹೆಚ್ಚು ಕಡಿಮೆ ಗುರುತಿಸಿ ಬರೆಯಿರಿ.**

1) 36, 48, 80, 75 ಹೆಚ್ಚು ____ ಕಡಿಮೆ _____

2) 25, 32, 44, 58 ಹೆಚ್ಚು ____ ಕಡಿಮೆ _____

3) 11, 21, 31, 20 ಹೆಚ್ಚು ____ ಕಡಿಮೆ _____

**2. ದೊಡ್ಡ ಸಂಖ್ಯೆಗೆ ವೃತ್ತ ಹಾಕಿರಿ:**

1) 32 , 72 , 52 , 12 , 22


2) 38 , 78 , 18 , 28 , 48


3) 90 , 70 , 80 , 40 , 60


**3. ಕೆಳಗಿನವುಗಳಲ್ಲಿ ಚಿಕ್ಕ ಸಂಖ್ಯೆಗೆ ಗೆರೆ ಎಳೆಯಿರಿ.**

1) 92, 48, 36, 87
2) 2, 81, 94, 70
3) 96, 82, 75, 48


4. **ಚಿತ್ರದ ಒಳಗಿರುವ ಸಮ ಸಂಖ್ಯೆಗಳಿಗೆ ವೃತ್ತ ಹಾಕಿರಿ:**








**5. ಹೆಚ್ಚು, ಕಡಿಮೆ, ಸಮ ಸಂಖ್ಯೆ ಬರೆಯಿರಿ:**





ಹೆಚ್ಚು ___, ಕಡಿಮೆ ____ , ಸಮ _____

DIET CHIKKAMAGALURU

# ದಶಕ ರಹಿತ ಸಂಕಲನ ಮತ್ತು ವ್ಯವಕಲನ (ಪುನರ್ಮನನ)

## ಅಭ್ಯಾಸ ಚಟುವಟಿಕೆ.

1. ಸಂಕಲನ ಮಾಡಿರಿ.





2. ಕೆಳಗಿನ ಸಂಕಲನ ಮಾಡಿ ಸರಿಯಾದ ಉತ್ತರವನ್ನು ಕೆಳಗೆ ಕೊಟ್ಟಿರುವ ಬಾಕ್ಸ್ ನಲ್ಲಿ ಬರೆಯಿರಿ.

42+24= ☐
34+63= ☐
62+16= ☐
22+22= ☐
53+23= ☐
25+42= ☐

3. ನಿಮ್ಮ ಮನೆಯ ಹತ್ತಿರ 45 ತರಕಾರಿ ಸಸಿಗಳನ್ನು ಬೆಳೆದಿದ್ದು ಅದರಲ್ಲಿ ನಿಮ್ಮ ತಂದೆಯವರು 24 ಸಸಿಗಳನ್ನು ಗದ್ದೆಯಲ್ಲಿ ನೆಡಲು ಕಿತ್ತುಕೊಂಡು ಹೋದರೆ ನಿಮ್ಮ ಮನೆಯ ಬಳಿ ಉಳಿಯುವ ಸಸಿಗಳು ಎಷ್ಟು?

4. ಚಿತ್ರದ ಒಳಗಿರುವ ಲೆಕ್ಕಗಳನ್ನು ಮಾಡಿರಿ.



## 5. ಕಳೆಯಿರಿ.

1) 76–12= ☐

2) 94–22= ☐

3) 65–43= ☐

4) 45–10= ☐

## ಮೌಲ್ಯಮಾಪನ

**1.** ನಿನ್ನ ಹತ್ತಿರ 50 ರೂಪಾಯಿ ಇದ್ದು, ಅಪ್ಪ ನಿನಗೆ 22 ರೂಪಾಯಿ ಕೊಟ್ಟರೆ, ಒಟ್ಟು ನಿನ್ನ ಬಳಿ ಎಷ್ಟು ಹಣವಿರುತ್ತದೆ?

**2.** ಕೂಡಿಸು.

| 45 | 80 | 64 |
|---|---|---|
| +43 | +10 | +22 |

| 27 | 44 | 76 |
|---|---|---|
| +62 | +44 | +11 |

10+30=

43+52=

**3.** ಕಳೆಯಿರಿ.

38 – 28 = ☐

**4.** ಕೆಳಗಿನ ಲೆಕ್ಕಗಳನ್ನು ಮಾಡಿರಿ.

| 98 | 63 | 48 | 86 |
|---|---|---|---|
| –42 | –12 | –21 | –54 |
| ☐ | ☐ | ☐ | ☐ |

# ಕಲಿಕಾಂಶ : 100 ರ ಕಲ್ಪನೆ ಮತ್ತು ಸ್ಥಾನ ಬೆಲೆ

## ಕಲಿಕಾಂಶ ಚಟುವಟಿಕೆ:–

**ಚಟುವಟಿಕೆ–1 ಹಾಡು;**

(ಹಿರಿಯರ ಸಹಾಯದಿಂದ ಹಾಡನ್ನು ರಾಗವಾಗಿ 2–3 ಬಾರಿ ಹಾಡಿ, ಅರ್ಥ ಮಾಡಿಕೊಳ್ಳಿ)

ಹತ್ತರ ಹತ್ತು ಸೇರಿ ನೂರು ಆಯಿತು

ಬಿಡಿ ಹತ್ತು ನೂರು ಅರಿವು ಮೂಡಿತು

ನೂರು ನೂರು ಸೇರಿ ಇನ್ನೂರು ಆಯಿತು

ಎರಡು ನೂರು ಈಗ ಇನ್ನೂರು ಆಯಿತು।

ಮೂರು ನೂರು ಸೇರಿ ಮುನ್ನೂರು ಆಯಿತು

ಎಣಿಕೆ ಬರಹ ಕಲಿಕೆ ಆರಂಭವಾಯಿತು।

ನಾಲ್ಕು ನೂರು ಸೇರಿ ನಾನೂರು ಆಯಿತು

ಅಂಕಿ ಸ್ಥಾನ ಅರಿವು ಮೂಡಿಬಂದಿತು।

ಐದು ನೂರು ಸೇರಿ ಐನೂರು ಆಯಿತು

ಸ್ಥಾನ ಬೆಲೆ ಕಲ್ಪನೆ ಅರ್ಥವಾಯಿತು.।

**ಚಟುವಟಿಕೆ–2**

ನೀನು ಈಗಾಗಲೇ 1 ರಿಂದ 99 ರ ವರೆಗಿನ ಸಂಖ್ಯೆಗಳನ್ನು ತಿಳಿದಿರುವೆ.

ಈಗ ಸರಿಯಾಗಿ ಗಮನಿಸು.

90+1=91, 91+1=92, 92+1=93, 93+1=94 . . . . ಆಗುತ್ತದೆ.

ಹೀಗೆಯೇ 1 ನ್ನು ಕೂಡುತ್ತಾ ಹೋದರೆ 98+1=99 ಅಗುತ್ತದೆ. ಹಾಗಾದರೆ 99+1= ಎಷ್ಟು ಆಗುತ್ತದೆ?

$$\begin{array}{r} 99 \\ +\ \ 1 \\ \hline 100 \end{array}$$


100 ನ್ನು ನೂರು ಎನ್ನುತ್ತೇವೆ. [ಒಂದು ನೂರು]. ಅಂದರೆ 99ಕ್ಕೆ 1ನ್ನು ಸೇರಿಸಿದರೆ ನೂರು ಆಗುತ್ತದೆ.

DIET CHIKKAMAGALURU

**ಚಟುವಟಿಕೆ–3:**

ನಿಮ್ಮ ಮನೆಯ ಬಳಿ ಸಿಗುವ ಕಡ್ಡಿಗಳನ್ನು ಒಂದೇ ಅಳತೆಗೆ ತುಂಡು ಮಾಡಿಕೊಳ್ಳಿ.

10 ಕಡ್ಡಿಗಳನ್ನು ಸೇರಿಸಿ ಒಂದು ಕಟ್ಟು ಮಾಡು. ಹೀಗೆಯೆ 9 ಕಟ್ಟು ಮಾಡಿಕೊಳ್ಳಿ



ಹತ್ತರ ಒಂಭತ್ತು ಕಟ್ಟುಗಳು == 90




ಹತ್ತರ 1 ಕಟ್ಟು == + 10

100

ಅಂದರೆ, 90+10=100 ಅಗುತ್ತದೆ. [ತೊಂಭತ್ತು + ಹತ್ತು = ನೂರು]

ಹತ್ತರ ಹತ್ತು ಕಟ್ಟುಗಳು ಸೇರಿ 100 ಆಗುತ್ತದೆ.

99+1= 100 -----→



ಹಿಂದಿನ ತರಗತಿಯಲ್ಲಿ ಮಣಿಕಟ್ಟಿನಲ್ಲಿ ಆಡುವಾಗ 2 ಸ್ಥಾನಗಳಿಗೆ ಸ್ಥಾನಬೆಲೆ ತಿಳಿದಿರುವೆ.

ಆದರೆ ಈಗ ಮೂರು ಅಂಕಿಗಳಿವೆ.

| ನೂರು | ಹತ್ತು | ಬಿಡಿ |
|---|---|---|
| 1 | 0 | 0 |

ಸ್ಥಾನಗಳನ್ನು ಹೇಳುವಾಗ ಬಿಡಿ, ಹತ್ತು, ನೂರು ಎಂದು ಹೇಳಬೇಕು.

## ಅಭ್ಯಾಸ ಚಟುವಟಿಕೆ

**ಇದನ್ನು ತಿಳಿ:**

- 99 ಕ್ಕೆ 1 ನ್ನು ಸೇರಿಸಿದರೆ 100 ಆಗುತ್ತದೆ
- 10ರ 10 ಕಟ್ಟುಗಳು ಸೇರಿ 100 ಆಗುತ್ತದೆ.
- 100 ಎಂಬುದು ಮೂರು ಅಂಕಿಗಳ ಸಂಖ್ಯೆ
- ಮೂರು ಅಂಕಿಯ ಅತಿ ಚಿಕ್ಕ ಸಂಖ್ಯೆ 100 ಆಗಿದೆ.
- ನೂರರಲ್ಲಿನ ಮೂರು ಅಂಕಿಗಳನ್ನು ಬಿಡಿ, ಹತ್ತು ನೂರು ಎಂದು ಗುರುತಿಸುತ್ತೇವೆ.
- 100 ರಲ್ಲಿ, ಬಿಡಿ ಸ್ಥಾನದಲ್ಲಿ 0, ಹತ್ತರ ಸ್ಥಾನದಲ್ಲಿ 0 ಹಾಗೂ ನೂರರ ಸ್ಥಾನದಲ್ಲಿ 1 ನ್ನು ಬರೆಯುತ್ತೇವೆ.

ಮಾದರಿಯಂತೆ ನೀನೇ ಪ್ರಯತ್ನಿಸಿ:

| | | | | | | | |
|---|---|---|---|---|---|---|---|
| 94 | 95 | 98 | 90 | 80 | 65 | 27 | 50 |
| +6 | + 5 | + 2 | + 10 | + 20 | + 35 | +73 | +50 |
| 100 | | | | | | | |

ಮತ್ತಷ್ಟು ಚಟುವಟಿಕೆಗಳು:–

- ಈ ಮೇಲಿನಂತೆ ಬೇರೆ ಸಂಖ್ಯೆಗಳಿಂದ 100 ಮೊತ್ತ ಬರುವಂತೆ ಪ್ರಯತ್ನಿಸಿ.
- ಪೋಷಕರಿಂದ 100 ರ ನೋಟುಗಳನ್ನು ಪಡೆದು ವೀಕ್ಷಿಸಿ, ಎಣಿಕೆ ಮಾಡಿ.

## ಮೌಲ್ಯಮಾಪನ ಚಟುವಟಿಕೆ

- ಮೊತ್ತ 100 ಬರುವ ಸಂಖ್ಯೆಗಳ ಬಾಕ್ಸ್ ಗೆ ಸರಿ ಗುರುತು ಹಾಕಿ:

| | | | | | |
|---|---|---|---|---|---|
| 97 | 70 | 45 | 67 | 88 | 65 |
| + 3 | + 30 | + 54 | + 33 | + 10 | + 35 |
| ☐ | ☐ | ☐ | ☐ | ☐ | ☐ |
| ○ | ○ | ○ | ○ | ○ | ○ |

**ಯೋಚಿಸಿ ಉತ್ತರಿಸಿ:**

100 ಎಂಬುದನ್ನು ನೀನು ಗಮನಿಸಿದ್ದರೆ ಸರಿ ಗುರುತು ಹಾಕಿ.

- ನೋಟಿನಲ್ಲಿ ( ನೋಟುಗಳ ಮೇಲೆ) ☐
- ಕ್ರಿಕೇಟ್ ನಲ್ಲಿ ಶತಕ ☐
- ಪೋಲೀಸ್ ಸಹಾಯವಾಣಿ ☐
- ಶತಾಯುಷಿ ಅಜ್ಜ/ ಅಜ್ಜಿ ☐
- ಸಿನೆಮಾ 100 ದಿನಗಳ ಸಂಭ್ರಮ ☐

ಸೂಚನೆ: ಹಿರಿಯರು ಮಕ್ಕಳಿಗೆ ಪ್ರತಿ ಹಂತದಲ್ಲೂ ಮನದಟ್ಟಾಗುವಂತೆ ವಿವರಿಸಿ ಚಟುವಟಿಕೆ ಪೂರ್ಣಗೊಳಿಸುವುದು.

DIET CHIKKAMAGALURU

## ಕಲಿಕಾಂಶ : 0ಯಿಂದ 500ರ ಎಣಿಕೆ ಮತ್ತು ಬರವಣಿಗೆ

**ಕಲಿಕಾಂಶ ಚಟುವಟಿಕೆ:–**

ಈ ಹಿಂದೆ ನೀನು ಸಿದ್ಧಪಡಿಸಿಕೊಂಡ ಕಡ್ಡಿಗಳ ಜೊತೆಗೆ ಮತ್ತಷ್ಟು ಕಡ್ಡಿಗಳನ್ನು ಸಿದ್ಧಪಡಿಸಿಕೊಳ್ಳಿ. 100 ಕ್ಕೆ 1 ಕಡ್ಡಿ ಸೇರಿಸು, ಆಗ 101 ಅಗುತ್ತದೆ; ಅದಕ್ಕೆ ಮತ್ತೆ 1 ಕಡ್ಡಿ ಸೇರಿಸು 102 ಆಗುತ್ತದೆ.

ಹೀಗೆ ಪ್ರತಿ ಬಾರಿ 1 ಕಡ್ಡಿ ಸೇರಿಸು ಮತ್ತು 103, 104, 105, 106, 107, 108, 109, 110, 111, 112. . . ಎಂದು ಎಣಿಸುತ್ತಾ ಮುಂದುವರಿಸಿ.

| | | | | | | |
|---|---|---|---|---|---|---|
| 100 | 101 | 102 | 103 ---- | 109 | 110 | 111 |
| + 1 | + 1 | + 1 | + 1---- | + 1 | + 1 | + 1 |
| 101 | 102 | 103 | 104 | 110 | 111 | 112 |

ನೂರಾ ಒಂದು, ನೂರಾ ಎರಡು, ನೂರಾ ಮೂರು, ನೂರಾ ನಾಲ್ಕು, ...., ನೂರಾ ಹತ್ತು, ನೂರಾ ಹನ್ನೊಂದು, ನೂರಾ ಹನ್ನೆರಡು, . . .

(ನೂರರಿಂದ ಪ್ರಾರಂಭವಾಗುವ ಸಂಖ್ಯೆಗಳಲ್ಲಿ ನೂರರ ಸ್ಥಾನದಲ್ಲಿ 1 ಇರುತ್ತದೆ.)

- ಪಕ್ಕದಲ್ಲಿರುವ ಕೋಷ್ಟಕದ ಸಹಾಯದಿಂದ 101 ರಿಂದ 199 ರವರೆಗೆ ಹೇಳಿ

| | | |
|---|---|---|
| 199 | 200 | 201 |
| + 1 | + 1 | + 1 |
| 200 | 201 | 202 |

199 ರ ನಂತರ 200 (ಇನ್ನೂರು) ಆಗುತ್ತದೆ.
201 ರಿಂದ 299 ರವರೆಗೆ ಸಂಖ್ಯೆಗಳನ್ನು ಹೇಳಿ
(ಇನ್ನೂರರಿಂದ ಪ್ರಾರಂಭವಾಗುವ ಸಂಖ್ಯೆಗಳಲ್ಲಿ ನೂರರ ಸ್ಥಾನದಲ್ಲಿ 2 ಇರುತ್ತದೆ)

| | | |
|---|---|---|
| 299 | 300 | 301 |
| + 1 | + 1 | + 1 |
| 300 | 301 | 302 |

299 ರ ನಂತರ 300, 399 ರ ನಂತರ 400 ಹಾಗೂ 499 ರ ನಂತರ 500 ಬರುತ್ತದೆ.

| | |
|---|---|
| 399 | 499 |
| + 1 | + 1 |
| 400 | 500 |

| ನೂರು | ಹತ್ತು | ಬಿಡಿ | ಸಂಖ್ಯೆ |
|---|---|---|---|
| 1 | 0 | 1 | 101 |
| 1 | 0 | 2 | 102 |
| 1 | 0 | 3 | 103 |
| 1 | 0 | 4 | 104 |
| 1 | 0 | 5 | 105 |
| | | | |
| 1 | 0 | 9 | 109 |
| 1 | 1 | 0 | 110 |
| 1 | 1 | 1 | 111 |

**ಸೂಚನೆ:**

- 1 ರಿಂದ 99 ಹೇಳುವುದನ್ನು ಕಲಿತಿರುವೆ. ನಂತರ 100 ಬರುತ್ತದೆ ಎಂದು ತಿಳಿದಿರುವೆ. ನಂತರದಲ್ಲಿ ನೂರ ಎಂದು ಹೇಳಿ 1 ರಿಂದ 99 ಸೇರಿಸು. ನೂರ ಒಂದು, ನೂರ ಎರಡು.. ಹೀಗೆ
- ಮನೆಯಲ್ಲಿ ಹಿರಿಯರ ಸಹಾಯದಿಂದ 1 ರಿಂದ 500 ರ ವರೆಗಿನ ಸಂಖ್ಯೆಗಳನ್ನು ತಪ್ಪಿಲ್ಲದೇ ಹೇಳುವುದನ್ನು ಕಲಿಯಿರಿ.
- ಎರಡು ನೂರು ಅಂದರೆ ಇನ್ನೂರು, ಮೂರು ನೂರು ಮುನ್ನೂರು, ನಾಲ್ಕು ನೂರು ನಾನ್ನೂರು, ಐದು ನೂರು ಐನೂರು ಆಗಿದೆ.

DIET CHIKKAMAGALURU

## ಅಭ್ಯಾಸ ಚಟುವಟಿಕೆ:

### ನೋಟ್ ಪುಸ್ತಕದಲ್ಲಿ ಈ ಕೆಳಗಿನಂತೆ ಬರೆಯಿರಿ:

| | | | | | | | | | |
|---|---|---|---|---|---|---|---|---|---|
| 101 | 102 | 103 | 104 | 105 | 106 | 107 | 108 | 109 | 110 |
| 111 | 112 | 113 | 114 | 115 | 116 | 117 | 118 | 119 | 120 |
| 121 | 122 | 123 | 124 | 125 | 126 | 127 | 128 | 129 | 130 |
| 131 | 132 | 133 | 134 | 135 | 136 | 137 | 138 | 139 | 140 |
| 141 | 142 | 143 | 144 | 145 | 146 | 147 | 148 | 149 | 150 |
| 151 | 152 | 153 | 154 | 155 | 156 | 157 | 158 | 159 | 160 |
| 161 | 162 | 163 | 164 | 165 | 166 | 167 | 168 | 169 | 170 |
| 171 | 172 | 173 | 174 | 175 | 176 | 177 | 178 | 179 | 180 |
| 181 | 182 | 183 | 184 | 185 | 186 | 187 | 188 | 189 | 190 |
| 191 | 192 | 193 | 194 | 195 | 196 | 197 | 190 | 199 | 200 |

**ಸೂಚನೆ:– ಮೇಲಿನಂತೆಯೇ** **201 ರಿಂದ 300,**

**301 ರಿಂದ 400,**


**401 ರಿಂದ 500 ರ ವರೆಗೆ**

**ಸಂಖ್ಯೆಗಳನ್ನು ಹೇಳುತ್ತಾ ನೋಟ್ ಪುಸ್ತಕದಲ್ಲಿ ಬರೆಯಿರಿ.**

DIET CHIKKAMAGALURU

## ಮೌಲ್ಯಮಾಪನ ಚಟುವಟಿಕೆ

- ಈ ಚಿತ್ರದಲ್ಲಿ ನಿಮ್ಮ ಮನೆಯ ಹಿರಿಯರು ತೋರಿಸಿದ ಸಂಖ್ಯೆಗಳನ್ನು ಕ್ರಮವಾಗಿ ಹೇಳಿ.
- ಹಿರಿಯರ ಸಹಾಯ ಇಲ್ಲದೇ ಇದ್ದರೆ, ನಿನಗಿಷ್ಟವಾದ 4 ಭಾಗ ಆರಿಸಿಕೋ. ಅವುಗಳನ್ನು ನೋಟ್ ಪುಸ್ತಕದಲ್ಲಿ ಉತ್ತರಿಸಿ:




**ಸೂಚನೆ: 101 ರಿಂದ 160 ಎಂದರೆ 101 ರಿಂದ 160 ರ ವರೆಗೆ ಸಂಖ್ಯೆಗಳನ್ನು ಬರೆಯುವುದು.**

## ಕಲಿಕಾಂಶ: 0–500 ಸಂಖ್ಯೆಗಳ ಸ್ಥಾನ ಬೆಲೆ

### ಕಲಿಕಾಂಶ ಚಟುವಟಿಕೆ:

**ನೀವು ಈಗಾಗಲೇ ಮೂರಂಕಿ ಅಂಕಿಗಳನ್ನು ಹೇಳಲು, ಓದಲು, ಬರೆಯಲು ಕಲಿತಿರುವಿರಿ.**
**100ರ ಸ್ಥಾನ ಬೆಲೆಪಟ್ಟಿಯನ್ನೂ ತಿಳಿದಿರುವಿರಿ, ಈಗ ಇನ್ನಷ್ಟು ತಿಳಿಯೋಣ.**
**169 ನ್ನು ಸ್ಥಾನ ಬೆಲೆ ಪಟ್ಟಿಯಲ್ಲಿ ಬರೆದಿರುವುದನ್ನು ಗಮನಿಸಿ.**

| ನೂರು | ಹತ್ತು | ಬಿಡಿ | ಸಂಖ್ಯೆ |
|---|---|---|---|
| 1 | 6 | 9 | 169 |
| ಕೆಳಗಿನ ಸಂಖ್ಯೆಗಳನ್ನು ಗಮನಿಸು ಮತ್ತು ಬರೆಯಿರಿ | | | |
| 2 | 4 | 5 | 245 |
| 1 | 0 | 9 | 109 |
| 2 | 1 | 1 | |
| 4 | 9 | 7 | |
| 3 | 4 | 1 | |
| 4 | 6 | 0 | |

**ಸೂಚನೆ: ನೋಟ್ ಪುಸ್ತಕದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಗಳನ್ನು ಹೇಳುತ್ತಾ ಬರೆದು ಅಭ್ಯಾಸ ಮಾಡಿ.**

## ಕಲಿಕಾಂಶ: 0–500 ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ

### ಕಲಿಕಾಂಶ ಚಟುವಟಿಕೆ:

**ಈ ಕೆಳಗೆ ಸಂಖ್ಯೆಗಳನ್ನು ಓದುವ ಕ್ರಮದಂತೆ ಪದಗಳಲ್ಲಿ ಬರೆಯಲಾಗಿದೆ. ಗಟ್ಟಿಯಾಗಿ 2–3 ಬಾರಿ ಓದಿ, ನಂತರ ನೋಟ್ ಪುಸ್ತಕದಲ್ಲಿ ಬರೆಯಿರಿ.**

| | | |
|---|---|---|
| 1–ಒಂದು | 11– ಹನ್ನೊಂದು | 21–ಇಪ್ಪತ್ತೊಂದು |
| 2–ಎರಡು | 12–ಹನ್ನೆರಡು | 22–ಇಪ್ಪತ್ತೆರಡು |
| 3–ಮೂರು | 13–ಹದಿಮೂರು | 23–ಇಪ್ಪತ್ಮೂರು |
| 4–ನಾಲ್ಕು | 14–ಹದಿನಾಲ್ಕು | 24–ಇಪ್ಪತ್ನಾಲ್ಕು |
| 5–ಐದು | 15–ಹದಿನೈದು | 25–ಇಪ್ಪತ್ತೈದು |
| 6–ಆರು | 16–ಹದಿನಾರು | 26–ಇಪ್ಪತ್ತಾರು |
| 7–ಏಳು | 17–ಹದಿನೇಳು | 27–ಇಪ್ಪತ್ತೇಳು |
| 8–ಎಂಟು | 18–ಹದಿನೆಂಟು | 28–ಇಪ್ಪತ್ತೆಂಟು |
| 9–ಒಂಭತ್ತು | 19–ಹತ್ತೊಂಭತ್ತು | 29–ಇಪ್ಪತ್ತೊಂಭತ್ತು |
| 10–ಹತ್ತು | 20–ಇಪ್ಪತ್ತು | 30–ಮೂವತ್ತು |

**ಈ ಕೆಳಗಿನ ಸುಳಿವುಗಳನ್ನು ಬಳಸಿಕೊಂಡು ನೋಟ್ ಪುಸ್ತಕದಲ್ಲಿ 1 ರಿಂದ 100 ರ ವರೆಗೆ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ.**

**31–ಮೂವತ್ತೊಂದು, 40–ನಲವತ್ತು, 50–ಐವತ್ತು, 60–ಅರವತ್ತು, 70–ಎಪ್ಪತ್ತು, 80–ಎಂಭತ್ತು, 90–ತೊಂಭತ್ತು,**

DIET CHIKKAMAGALURU

## ಅಭ್ಯಾಸ ಚಟುವಟಿಕೆ

ಈ ಕೆಳಗೆ ನಿಮ್ಮ ಅಭ್ಯಾಸಕ್ಕೆ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಲಾಗಿದೆ, ಓದಿ ಬರೆದು ಹಿರಿಯರಿಗೆ ತೋರಿಸಿ.

| | | |
|---|---|---|
| **145** | ನೂರ ನಲವತ್ತೈದು | |
| **476** | ನಾಲ್ಕು ನೂರ ಎಪ್ಪತ್ತಾರು | |
| **309** | ಮುನ್ನೂರ ಒಂಭತ್ತು | |
| **280** | ಇನ್ನೂರ ಎಂಭತ್ತು | |
| **333** | ಮುನ್ನೂರ ಮೂವತ್ತೂರು | |
| **207** | ಇನ್ನೂರ ಏಳು | |

ಸಂಖ್ಯೆಗಳಿಗೆ ಸರಿಯಾದ ಪದಗಳನ್ನು ಗೆರೆ ಎಳೆದು ಹೊಂದಿಸಿ

| | | |
|---|---|---|
| **237** | | ನಾಲ್ಕು ನೂರ ಅರವತ್ತು |
| **460** | | ಮುನ್ನೂರ ಹತ್ತು |
| **198** | | ಇನ್ನೂರ ಮೂವತ್ತೇಳು |
| **310** | | ನೂರ ತೊಂಭತ್ತೆಂಟು |

ಈ ಕೆಳಗಿನ ಸುಳಿವುಗಳನ್ನು ಬಳಸಿಕೊಂಡು ನೋಟ್ ಪುಸ್ತಕದಲ್ಲಿ **1** ರಿಂದ **500** ರ ವರೆಗೆ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ.

**100–ನೂರು, 200–ಇನ್ನೂರು, 300– ಮುನ್ನೂರು, 400–ನಾನ್ನೂರು, 500–ಐನೂರು**

## ಮೌಲ್ಯಮಾಪನ ಚಟುವಟಿಕೆ

**ಈ ಕೆಳಗಿನ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಿರಿ:**

- 397–
- 458–
- 269–
- 152–
- 345–

**ಈ ಕೆಳಗಿನ ಪದಗಳನ್ನು ಸಂಖ್ಯೆಗಳಲ್ಲಿ ಬರೆಯಿರಿ:**

- ನಾಲ್ಕು ನೂರ ನಲವತ್ನಾಲ್ಕು–
- ಒಂದು ನೂರ ಎಂಟು–
- ಇನ್ನೂರ ಇಪ್ಪತ್ತು–
- ಮುನ್ನೂರ ಐವತು–ತ
- ನೂರ ಇಪ್ಪತ್ತೈದು–

DIET CHIKAMAGALURU

## ಪರಿಕಲ್ಪನೆ:– ಹಿಂದೆ, ಮುಂದೆ, ಮಧ್ಯೆ (ವ್ಯಾಪ್ತಿ 0–500)

**ಕಲಿಕಾಂಶ ಚಟುವಟಿಕೆ.**

**ಕಲಿಕಾ ಸಾಮಗ್ರಿ– ಅಂಕಿ ಸಂಖ್ಯೆಗಳು, ಅಭ್ಯಾಸ ಹಾಳೆ ಮತ್ತು ನೋಟ್ ಪುಸ್ತಕ. ಕಲ್ಲು, ಹುಣಸೇ ಬೀಜಗಳು,**

### ಚಟುವಟಿಕೆ–1




**ಚಿತ್ರದಲ್ಲಿ ಇರುವ ಮಕ್ಕಳನ್ನು ಗಮನಿಸಿ.**

- ಮೊದಲಿಗೆ ನಿಂತಿರುವ ಸಾನಿಕಳ ಕ್ರಮ ಸಂಖ್ಯೆ ಎಷ್ಟು? ______
- ಮಧ್ಯದಲ್ಲಿ ನಿಂತಿರುವ ದೈವಿಕಾಳ ಕ್ರಮ ಸಂಖ್ಯೆ ಎಷ್ಟು? ________
- ಕೊನೆಗೆ ನಿಂತಿರುವ ಯಶಸ್ವಿಯ ಕ್ರಮಸಂಖ್ಯೆ ಎಷ್ಟು? _________,
- ದೈವಿಕಾಳ ಮುಂದಿನ ಕ್ರಮ ಸಂಖ್ಯೆ ಎಷ್ಟು?_________
- ಸಾನಿಕ ಮತ್ತು ಯಶಸ್ವಿಯ ಮಧ್ಯದ ಸಂಖ್ಯೆ ಎಷ್ಟು? ______

ಹಾಗಾದರೆ 345 ರ ಮುಂದಿನ ಸಂಖ್ಯೆ 346 ಅಗುತ್ತದೆ. 346 ರ ಮುಂದಿನ ಸಂಖ್ಯೆ 347 ಅಗುತ್ತದೆ. 345 ಮತ್ತು 347 ರ ಮಧ್ಯದ ಸಂಖ್ಯೆ 346 ಅಗಿರುತ್ತದೆ. ಹಾಗೆಯೇ 346ರ ಹಿಂದಿನ ಸಂಖ್ಯೆ 345 ಅಗಿದ್ದು, 347 ರ ಹಿಂದಿನ ಸಂಖ್ಯೆ 346 ಅಗಿರುತ್ತದೆ.

### ಚಟುವಟಿಕೆ–2





**ಮೇಲಿನ ಚಿತ್ರಗಳನ್ನು ಗಮನಿಸಿ.**

- ರೇಸಿನಲ್ಲಿರುವ ಕಾರುಗಳಲ್ಲಿ ಮುಂದೆ ಇರುವ ಕಾರಿನ ಮೇಲೆ ಇರುವ ಸಂಖ್ಯೆ ಎಷ್ಟು? _______
- 418ರ ರ ಹಿಂದಿನ ಸಂಖ್ಯೆ ಎಷ್ಟು? _________
- ಹಿಂದೆ ಇರುವ ಕಾರಿನ ಸಂಖ್ಯೆ ಎಷ್ಟು? ________
- 418 ಮತ್ತು 416 ರ ಮಧ್ಯೆಯ ಸಂಖ್ಯೆ ಎಷ್ಟು? _____

DIET CHIKKAMAGALURU

## ಅಭ್ಯಾಸ ಚಟುವಟಿಕೆ

1. ಕೆಳಗೆ ಬಿಟ್ಟಿರುವ ಜಾಗದಲ್ಲಿ ಸರಿಯಾದ ಸಂಖ್ಯೆಯನ್ನು ಭರ್ತಿ ಮಾಡಿರಿ.




2. ಹಿಂದಿನ, ಮುಂದಿನ ಮತ್ತು ಮಧ್ಯದ ಸಂಖ್ಯೆ ಬರೆಯಿರಿ.

| ಹಿಂದಿನ ಸಂಖ್ಯೆ | |
|---|---|
| ☐ | 130 |
| ☐ | 189 |
| ☐ | 208 |
| ☐ | 265 |
| ☐ | 372 |
| ☐ | 395 |
| ☐ | 408 |
| ☐ | 484 |

| ಮಧ್ಯದ ಸಂಖ್ಯೆ | | |
|---|---|---|
| 165 | ☐ | 167 |
| 178 | ☐ | 180 |
| 224 | ☐ | 226 |
| 286 | ☐ | 288 |
| 344 | ☐ | 346 |
| 381 | ☐ | 383 |
| 451 | ☐ | 453 |
| 491 | ☐ | 493 |

| ಮುಂದಿನ ಸಂಖ್ಯೆ | |
|---|---|
| 175 | ☐ |
| 194 | ☐ |
| 201 | ☐ |
| 250 | ☐ |
| 315 | ☐ |
| 374 | ☐ |
| 444 | ☐ |
| 489 | ☐ |

## ಮೌಲ್ಯಮಾಪನ ಚಟುವಟಿಕೆ

**1. ಕೆಳಗಿನ ಸಂಖ್ಯಾ ಬೋರ್ಡ ಬಳಸಿಕೊಂಡು ಆಟ ಆಡುವುದು.**

ಎರಡು ಹುಣಸೇ ಬೀಜಗಳನ್ನು ತೆಗೆದುಕೊಂಡು ಕೆಳಗಿನ ಸಂಖ್ಯಾ ಬೋರ್ಡ್ ಮೇಲೆ ಹಾಕಿರಿ. ಹುಣಸೆ ಬೀಜವು ಯಾವ ಸಂಖೆಯ ಮೇಲೆ ಬೀಳುತ್ತದೆಯೋ ಆ ಸಂಖ್ಯೆ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ.

| | | | | | | |
|---|---|---|---|---|---|---|
| 417 | 201 | 07 | 403 | 219 | 485 | 396 |
| 101 | 94 | 314 | 456 | 100 | 08 | 447 |
| 114 | 157 | 251 | 111 | 57 | 80 | 10 |
| 48 | 444 | 207 | 95 | 300 | 333 | 399 |

## ಪರಿಕಲ್ಪನೆ:- ಹೆಚ್ಚು-ಕಡಿಮೆ-ಸಮ (ವ್ಯಾಪ್ತಿ 0-500)

**ಕಲಿಕಾಂಶ ಚಟುವಟಿಕೆ.**

**ಕಲಿಕಾ ಸಾಮಗ್ರಿಗಳು: ಚಿತ್ರಗಳು 0-500 ಸಂಖ್ಯಾ ಮಿಂಚುಪಟ್ಟಿಗಳು**

1. ಕೆಳಗಿನ ಚಿತ್ರ ಗಮನಿಸಿ, ಸೌತೆಕಾಯಿಗಳ ಸಂಖ್ಯೆ ನೀಡಲಾಗಿದೆ. ಅದರ ಆಧಾರದಲ್ಲಿ ಹೆಚ್ಚು ಕಡಿಮೆ ಗುರುತಿಸಿ:


185


120

ಮೊದಲನೇ ಬುಟ್ಟಿಯಲ್ಲಿ 185 ಸೌತೆಕಾಯಿಗಳು ಇದ್ದು ಎರಡನೇ ಬುಟ್ಟಿಯಲ್ಲಿ 120 ಸೌತೆಕಾಯಿಗಳು ಇವೆ. ಈಗ ಹೇಳಿ ಯಾವ ಬುಟ್ಟಿಯಲ್ಲಿ ಹೆಚ್ಚು ಸೌತೆಕಾಯಿಗಳು ಇವೆ ಎಂದು?

185 ಮತ್ತು 120 ರಲ್ಲಿ ಯಾವುದು ಹೆಚ್ಚು? ಮತ್ತು ಯಾವುದು ಕಡಿಮೆ? ತಿಳಿಸಿ.

ಇದರ ಮಧ್ಯೆ ಚಿಹ್ನೆ ಹಾಕಿ ಬರೆದಾಗ 185>120 ಎಂದು ಆಗುತ್ತದೆ. ಹಾಗೆಯೇ ಕೆಳಗಿನ ಚಿತ್ರ ಗಮನಿಸಿ


150


110

ಮೊದಲನೇ ಬುಟ್ಟಿಯಲ್ಲಿ 150 ತೆಂಗಿನಕಾಯಿಗಳು ಇದ್ದು ಎರಡನೇ ಬುಟ್ಟಿಯಲ್ಲಿ 110 ತೆಂಗಿನಕಾಯಿಗಳು ಇವೆ. ಈಗ ಹೇಳಿ ಯಾವ ಬುಟ್ಟಿಯಲ್ಲಿ ಹೆಚ್ಚು ತೆಂಗಿನಕಾಯಿಗಳು ಇವೆ ಎಂದು? 110 ಕಡಿಮೆ ಎಂದಾಯಿತು ಅಲ್ಲವೇ? ಇದನ್ನು ನಾವು ಸಂಕೇತ ರೂಪದಲ್ಲಿ ತೋರಿಸಿದಾಗ 110<150 ಎಂದು ಆಗುತ್ತದೆ.

ಚಿಹ್ನೆಯನ್ನು ಹೀಗೆ ಅರ್ಥ ಮಾಡುಕೊಳ್ಳಿರಿ.

**ಚಿಹ್ನೆ ಪರಿಚಯ**

**ಚಿಕ್ಕದು < ದೊಡ್ಡದು**

**ದೊಡ್ಡದು > ಚಿಕ್ಕದು**

**ಚಿಹ್ನೆಯನ್ನು ಹೇಗೆ ಬಳಸಬೇಕು ಎಂದು ಕೆಳಗಿನ ಉದಾಹರಣೆ ಗಮನಿಸಿ ಅರ್ಥ ಮಾಡಿಕೊಳ್ಳುವುದು.**

**450 > 418**

**ಸೂಚನೆಗಳು:-**

**ಸ್ಥಾನಕ್ಕೆ ಅನುಗುಣವಾಗಿ ಮೊದಲಿಗೆ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆನ್ನು ಗುರ್ತಿಸಿಕೊಳ್ಳುವುದು.**

**ನಂತದ ಗರಿಷ್ಠ ಸಂಖ್ಯೆಯನ್ನು ಮೊದಲು ಬರೆದುಕೊಂಡರೆ ದೊಡ್ಡದು ಚಿಹ್ನೆ ಮತ್ತು ಕನಿಷ್ಠ ಸಂಖ್ಯೆಯನ್ನು ಮೊದಲು ಬರೆದುಕೊಂಡರೆ ಚಿಕ್ಕದು ಚಿಹ್ನೆಯನ್ನು ಹಾಕುವುದು.**

ಮಾದರಿಯಂತೆ ಬರೆಯಿರಿ.

1) 180> 170 – 180 ಎಂಬುದು 170 ಕ್ಕಿಂತ ದೊಡ್ಡದು

2) 160<216 – 160 ಎಂಬುದು 216 ಕ್ಕಿಂತ ಚಿಕ್ಕದು

3) 300<847

4) 400=400

5) 444>333

6) 265<365

7) 488>307

8) 348 =348

9) 374>170

10) 405<428

## ಅಭ್ಯಾಸ ಚಟುವಟಿಕೆ

1. ಕೆಳಗಿನ ಸಂಖ್ಯೆಗಳಲ್ಲಿ ಗರಿಷ್ಠ ಸಂಖ್ಯೆಗೆ ವೃತ್ತ ಹಾಕಿರಿ.

| | | | | | |
|---|---|---|---|---|---|
| 180 | 250 | 190 | 210 | 424 | 186 |
| 85 | 35 | 380 | 157 | 168 | 419 |
| 350 | 417 | 214 | 488 | 306 | 106 |
| 278 | 287 | 333 | 444 | 150 | 250 |
| 314 | 414 | 470 | 307 | 461 | 308 |

2. ಕೆಳಗಿನ ಸಂಖ್ಯೆಗಳಲ್ಲಿ ಕನಿಷ್ಠ ಸಂಖ್ಯೆಗೆ ವೃತ್ತ ಹಾಕಿರಿ.


| | | | | | |
|---|---|---|---|---|---|
| 420 | 310 | 187 | 145 | 98 | 38 |
| 308 | 104 | 499 | 21 | 117 | 408 |
| 200 | 300 | 360 | 415 | 235 | 185 |
| 450 | 458 | 360 | 415 | 235 | 184 |
| 260 | 370 | 290 | 390 | 300 | 200 |

3. ಕೆಳಗಿನ ಸಂಖ್ಯೆಗಳಲ್ಲಿ ಸಮ ಸಂಖ್ಯೆಗೆ ವೃತ್ತ ಹಾಕಿರಿ.

| | | | | | |
|---|---|---|---|---|---|
| 94 | 119 | 119 | 308 | 280 | 280 |
| 200 | 86 | 115 | 490 | 306 | 318 |
| 464 | 200 | 115 | 160 | 409 | 409 |
| 130 | 130 | 180 | 160 | 138 | 96 |
| 480 | 180 | 206 | 138 | 405 | 96 |

## ಮೌಲ್ಯಮಾಪನ ಚಟುವಟಿಕೆ

1. ಮನೆಯ ಗೋಡೆಯ ಮೇಲೆ ಬರೆದಿರುವ ಸಂಖ್ಯೆಗಳನ್ನು ಗರಿಷ್ಠ ಕನಿಷ್ಠ ಮತ್ತು ಸಮವೆಂದು ಗುರ್ತಿಸಿ ಚಿಹ್ನೆ ಹಾಕಿರಿ.



**ಸಂಕಲನ (ದಶಕ ರಹಿತ)**

**(ಮೊತ್ತ 500 ಕ್ಕೆ ಮೀರದಂತೆ)**

**ಕಲಿಕಾಂಶ ಚಟುವಟಿಕೆ**

**ಸೂಚನೆಗಳು:**

- **ಸಂಖ್ಯಾ ಮಿಂಚು ಪಟ್ಟಿಗಳನ್ನು ಬರೆದಿಟ್ಟುಕೊಳ್ಳುವುದು.**
- **ಮೂರು ಮಾದರಿ ಗಾತ್ರದ ಗೋಲಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು. ಸಣ್ಣ ಗೋಲಿಗಳು, ಸಾಧಾರಣ ಗಾತ್ರದ ಗೋಲಿಗಳು ದೊಡ್ಡ ಗಾತ್ರದ ಗೋಲಿಗಳು.**
- **ಎಲ್ಲಾ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.**

**ಸಂಕಲನ ಕ್ರಿಯೆಯ ಆಟ:**

| | | | | | |
|---|---|---|---|---|---|
| 10 | 30 | 45 | 29 | 35 | 20 |
| + | + | + | + | + | + |
| 24 | 35 | 20 | 50 | 60 | 34 |
| | | | | | |

**ಸೂಚನೆಗಳು:**

- ಈ ಮೇಲಿನಂತೆ ಚೌಕಗಳನ್ನು ನೆಲದ ಮೇಲೆ ಬರೆದು, ಮಗುವನ್ನು ಈ ಚಟುವಟಿಕೆಗಳನ್ನು ಮಾಡುವಂತೆ ಮಾಡುವುದು.
- 1ನೇ ಸಾಲಿನ ಚೌಕದಲ್ಲಿ ಕ್ರಮವಾಗಿ 10, 30, 45, 29, 35, 20 ರ ಮಿಂಚು ಪಟ್ಟಿಗಳು, 2 ನೇ ಸಾಲಿನ ಚೌಕದಲ್ಲಿ + ಚಿಹ್ನೆಯ ಮಿಂಚುಪಟ್ಟಿಗಳನ್ನು ಮತ್ತು 3 ನೇ ಸಾಲಿನ ಚೌಕದಲ್ಲಿ ಕ್ರಮವಾಗಿ 24, 35, 20, 50, 60, 34 ರ ಮಿಂಚುಪಟ್ಟಿಗಳನ್ನು ಒಂದು ಡಬ್ಬದಲ್ಲಿ ಇಡುವುದು.
- ಮಗು ಎರಡು ಚೌಕದಲ್ಲಿನ ಮಿಂಚುಪಟ್ಟಿ ಎತ್ತಿಕೊಂಡು ಮಾನಸಿಕವಾಗಿ ಲೆಕ್ಕಮಾಡಿ ಮೊತ್ತವನ್ನು ಡಬ್ಬದಿಂದ ಹುಡುಕಿ ತರುವುದು.
- ಹೀಗೆ ಹೇಳಿದಾಗ ತಪ್ಪುಗಳು ಕಂಡುಬಂದಲ್ಲಿ ಪೋಷಕರು ಸರಿಪಡಿಸುವುದು.

DIET CHIKKAMAGALURU

## ವಿಸ್ತರಣಾ ರೂಪದಲ್ಲಿ ದಶಕ ರಹಿತ ಸಂಕಲನ

ಸಂಕಲನ ಕ್ರಿಯೆ ಮಾಡಲು ಸಮಸ್ಯೆಯನ್ನು ಈ ಕೆಳಗಿನಂತೆ ಬರೆದುಕೊಳ್ಳಲು ಸೂಚಿಸುವುದು. ಅದರ ಮುಂದೆ ವಿಸ್ತರಣಾ ರೂಪವನ್ನು ಎಷ್ಟು ನೂರುಗಳು, ಎಷ್ಟು ಹತ್ತುಗಳು, ಎಷ್ಟು ಬಿಡಿಗಳಿವೆ ಎಂದು ಪ್ರಶ್ನಿಸುತ್ತಾ ಬರೆದು ಹೇಳುವುದು.

| | | | |
|---|---|---|---|
| 254 = | 200(ನೂರು) ○ ○ | + 50(ಹತ್ತು) ○ ○ ○ ○ ○ | + 4(ಬಿಡಿ) ○ ○ ○ ○ |
| 235 = | 200 ○ ○ | + 30 ○ ○ ○ | + 5 ○ ○ ○ ○ ○ |
| 489 = | 400 ○ ○ ○ ○ | + 80 ○ ○ ○ ○ ○ ○ ○ ○ | + 9 ○ ○ ○ ○ ○ ○ ○ ○ ○ |

**ಸೂಚನೆ: ೦ ಚಿತ್ರ– ಎಂದರೆ ಗೋಲಿಗಳು.**

ಸಣ್ಣ ಗೋಲಿಗಳನ್ನು ಬಿಡಿ ಸ್ಥಾನದಲ್ಲಿ, ಸಾಧಾರಣ ಗೋಲಿಗಳನ್ನು ಹತ್ತರ ಸ್ಥಾನದಲ್ಲಿ ಹಾಗೂ ದೊಡ್ಡ ಗೋಲಿಗಳನ್ನು ನೂರರ ಸ್ಥಾನದಲ್ಲಿ ಜೋಡಿಸಿ.

ಇದೇ ಮಾದರಿಯಲ್ಲಿ ಕೆಳಗಿನ ಸಂಖ್ಯೆಗಳನ್ನು ವಿಸ್ತರಿಸಿ:


- 124+113=237
- 250+167=417
- 367+152=519

**ಅಡ್ಡ ಸಾಲುಗಳಲ್ಲಿ ಸಂಕಲನ:**

243+235=476

**ಸೂಚನೆ:** * ಸಮಸ್ಯೆಯನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ.

* ಮಾದರಿಂತೆ ಸ್ಥಾನ ಬೆಲೆ ಬರೆದು ಗೆರೆ ಎಳೆದು ಸಂಕಲನ ಮಾಡಿ.




| | | |
|---|---|---|
| 4 | 7 | 8 |

DIET CHIKKAMAGALURU

## ಅಭ್ಯಾಸ ಚಟುವಟಿಕೆ:

**1. ಮಾದರಿಯಂತೆ ಕೆಳಗಿನ ಸಂಕಲನದ ಲೆಕ್ಕಗಳನ್ನು ಮಾಡಿ:**

**ಮಾದರಿ:-**

```
  345=300+40+5          234=   +   +
+ 124=100+20+4        + 243=   +   +
  ------------          -------------
  469=400+60+9

  252=200+50+2          225=   +   +
+ 144=   +   +        + 264=   +   +
  ------------          -------------
```

**2. ಕಂಬಸಾಲಿನಲ್ಲಿ ಸಂಕಲನ ಮಾಡಿ:**

```
  123      215      324      204
+ 242    + 122    + 215    + 173
-----    -----    -----    -----
```

**3.ಅಡ್ಡ ಸಾಲಿನಲ್ಲಿ ಕೂಡಿಸಿ ಮೊತ್ತ ಬರೆಯಿರಿ:**

1. 265+232=
2. 326+173=
3. 304+180=
4. 222+135=

5. **ಮೌಖಿಕ ಲೆಕ್ಕಗಳು:**

- ಶರಣ್ಯಳ ಹತ್ತಿರ 200 ಚಾಕಲೇಟುಗಳಿದ್ದವು ಹಾಗೂ ವಿಮಲಳ ಹತ್ತಿರ 100 ಚಾಕಲೇಟುಗಳಿದ್ದವು. ಹಾಗಾದರೆ ಅವರ ಬಳಿ ಇರುವ ಒಟ್ಟು ಚಾಕಲೇಟುಗಳೆಷ್ಟು?

- ದೀಪಾವಳಿ ಹಬ್ಬಕ್ಕೆ ಪಟಾಕಿ ಕೊಳ್ಳಲು ಗೋಪಾಲನ ಅಪ್ಪ ಅವನಿಗೆ 300 ರೂಗಳನ್ನು ಕೊಟ್ಟರು, ಅವನ ಮಾವ 80 ರೂಗಳನ್ನು ಕೊಟ್ಟರು. ಹಾಗಾದರೆ ಗೋಪಾಲನ ಬಳಿ ಇರುವ ಒಟ್ಟು ಹಣವೆಷ್ಟು?

DIET CHIKKAMAGALURU

## ಮೌಲ್ಯಮಾಪನ ಚಟುವಟಿಕೆ:

1. ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದು ಸಂಕಲನ ಮಾಡಿ:-

| | | | |
|---|---|---|---|
| 423 | 315 | 243 | 304 |
| + 241 | + 222 | + 255 | + 273 |
| ______ | ______ | ______ | ______ |

2. ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಕಂಬ ಸಾಲಿನಲ್ಲಿ ಸಂಕಲನ ಮಾಡಿ:-

| | | | |
|---|---|---|---|
| 321 | 285 | 424 | 204 |
| + 242 | + 102 | + 135 | + 273 |
| ______ | ______ | ______ | ______ |

3. ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಅಡ್ಡ ಸಾಲಿನಲ್ಲಿ ಸಂಕಲನ ಮಾಡಿ:-

- 124+413= ☐
- 250+137= ☐
- 347+152= ☐

4. ಕೆಳಗಿನ ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಬಿಡಿಸಿರಿ:

- ಪತ್ರಿಕೆ ಅಂಗಡಿಯಲ್ಲಿ ಒಂದು ದಿನಕ್ಕೆ 215 ಉದಯವಾಣಿ ಪತ್ರಿಕೆ, 110 ಪ್ರಜಾವಾಣಿ ಪತ್ರಿಕೆ, 142 ವಿಜಯವಾಣಿ ಪತ್ರಿಕೆಗಳು ಮಾರಾಟವಾಗಿದ್ದರೆ,ಆ ಅಂಗಡಿಯಲ್ಲಿ ಮಾರಾಟವಾದ ಒಟ್ಟು ಪತ್ರಿಕೆಗಳ ಸಂಖ್ಯೆ ಎಷ್ಟು?

- ರಮೇಶನು ಅಂಗಡಿಯೊಂದರಲ್ಲಿ ರೂ 312 ಕ್ಕೆ ನೋಟ್ ಪುಸ್ತಕಗಳನ್ನು, ರೂ 215 ಕ್ಕೆ ಒಂದು ಜ್ಯಾಮಿತಿ ಪೆಟ್ಟಿಗೆಯನ್ನು ಕೊಂಡನು. ಹಾಗಾದರೆ ಅವನು ಅಂಗಡಿಯವನಿಗೆ ಕೊಡಬೇಕಾದ ಹಣವೆಷ್ಟು?

DIET CHIKKAMAGALURU

# ದಶಕ ಸಹಿತ ಸಂಕಲನ

## ಕಲಿಕಾಂಶ ಚಟುವಟಿಕೆ

**ಸೂಚನೆಗಳು:**

- ಸಂಖ್ಯಾ ಮಿಂಚು ಪಟ್ಟಿಗಳನ್ನು ಬರೆದಿಟ್ಟುಕೊಳ್ಳುವುದು.
- ಮೂರು ಮಾದರಿ ಗಾತ್ರದ ಗೋಲಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು. ಸಣ್ಣ ಗೋಲಿಗಳು, ಸಾಧಾರಣ ಗಾತ್ರದ ಗೋಲಿಗಳು ದೊಡ್ಡ ಗಾತ್ರದ ಗೋಲಿಗಳು.
- ಎಲ್ಲಾ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು.

**ವಿಸ್ತರಣಾ ರೂಪದಲ್ಲಿ ದಶಕ ಸಹಿತ ಸಂಕಲನ:**

ಮಕ್ಕಳು ಮಾದರಿಯಂತೆ ವಿಸ್ತರಿಸಿ ಬರೆದು ದಶಕ ತಗೆದುಕೊಳ್ಳುವ ಪ್ರಕ್ರಿಯೆ ಕಲಿಯುವರು:

| | ನೂ | | ಹ | | ಬಿ |
|---|---|---|---|---|---|
| 234= | 200 | + | 30 | + | 4 |
| 199= | 100 | + | 90 | + | 9 |

## ವ್ಯವಕಲನ 0 ಯಿಂದ 500 ರವರಗೆ (ದಶಕ ರಹಿತ)

**ಸಾಮರ್ಥ್ಯ–**

- **0** ಯಿಂದ 500 ರವರಗೆ ಸಂಖೆಗಳನ್ನು ಬಳಸಿ ದಶಕ ರಹಿತ ವ್ಯವಕಲನ ಮಾಡುವುದು.
- ಹೆಚ್ಚು ಬೆಲೆಯ ಸಂಖ್ಯೆಗಳಿಂದ ಕಡಿಮೆ ಬೆಲೆಯ ಸಂಖ್ಯೆಗಳನ್ನು ಕಳೆಯುವುದು.
- ವಿಸ್ತರಿಸಿ ಬರೆದು ವ್ಯವಕಲನ ಮಾಡುವುದು.

**ಸೂಚನೆ:–** (ಪೋಷಕರ ಅಥವಾ ಹಿರಿಯರ ಸಹಕಾರ ಪಡೆದುಕೊಳ್ಳುವುದು)

**ಕಲಿಕಾಂಶ ಚಟುವಟಿಕೆ**

ನೂರು– ಕಲ್ಲು ಹತ್ತು– ಬೀಜ ಬಿಡಿ– ಕಡ್ಡಿ


- 10 ಕಲ್ಲುಗಳನ್ನು 10 ಬೀಜಗಳನ್ನು ಮತ್ತು 10 ಕಡ್ಡಿಗಳನ್ನು ಸಂಗ್ರಹಿಸಿಕೊಳ್ಳಿ

ಈ ಕೆಳಗಿನ ಮಾದರಿಯಂತೆ ದೊಡ್ಡದಾಗಿ ಸ್ಥಾನಬೆಲೆ ಪಟ್ಟಿ ಬರೆದುಕೊಂಡು ಲೆಕ್ಕ ಮಾಡಿರಿ.

| ಸಂಖ್ಯೆಗಳು | ನೂರು | ಹತ್ತು | ಬಿಡಿ |
|---|---|---|---|
| 463 | | | |
| 352 | | | |
| 111 | 1 | 1 | 1 |

DIET CHIKKAMAGALURU

2. ಈ ಕಳಗಿನಂತೆ ಬರೆದುಕೊಂಡು ಲೆಕ್ಕ ಮಾಡಿರಿ:




ಈ ರೀತಿಯಾಗಿ ಮೂರು ನೂರರ ಕಟ್ಟುಗಳಲ್ಲಿ ಒಂದನ್ನು ಆರು ಹತ್ತರ ಕಟ್ಟುಗಳಲ್ಲಿ ಐದನ್ನು ಮತ್ತು ಎಂಟು ಬಿಡಿಗಳಲ್ಲಿ ನಾಲ್ಕನ್ನು ಕಳೆದು ಉಳಿದವುಗಳನ್ನು ಕೆಳಗಿನ ಬಾಕ್ಸ್ ನಲ್ಲಿ ಬರೆಯುದು. ಇದಕ್ಕಾಗಿ ಮನೆಯಲ್ಲಿ ಹಿರಿಯರ ಸಹಯ ಪಡೆದುಕೊಳ್ಳಿ.

## ಪುನರ್ಬಲನ

**1. ಮಾದರಿಯಂತೆ ವ್ಯವಕಲನ ಮಾಡಿ.**

ಮಾದರಿ:–

| ಮಾದರಿ | 1) | 2) | 3) | 4) |
|---|---|---|---|---|
| 395 | 463 | 345 | 496 | 376 |
| 274 | –254 | –251 | –375 | –245 |
| 121 | ____ | ____ | ____ | ____ |

**2. ಅಡ್ಡ ಸಾಲುಗಳಲ್ಲಿ ಕಳೆಯಿರಿ.**

1) 453–245= ____________ 3)369–256= ____________

2) 396–275=____________ 4) 357–139=____________

**3. ಮಾದರಿಯಂತೆ ವಿಸ್ತರಿಸಿ ಬರೆದು ನಂತರ ವ್ಯವಕಲನ ಮಾಡಿರಿ.**

457= 400+50+7

342= 300+40+2

115= 100+10+5

| 1) | 2) | 3) | 4) |
|---|---|---|---|
| 396 | 444 | 365 | 468 |
| –273 | –232 | –232 | –156 |
| ____ | ____ | ____ | ____ |
| ____ | ____ | ____ | ____ |

**4. ಈ ಕೆಳಗಿನ ಲೆಕ್ಕಗಳನ್ನು ಹೊಂದಿಸಿ ಬರೆಯಿರಿ.**

| | |
|---|---|
| 367–224 | 111 |
| 236–125 | 112 |
| 463–352 | 123 |

DIET CHIKKAMAGALURU

## ಮೌಲ್ಯಮಾಪನ ಚಟುವಟಿಕೆ

1. ವ್ಯವಕಲನ ಮಾಡಿ

| 428 | 396 | 465 | 268 | 326 |
|---|---|---|---|---|
| −345 | −275 | −351 | −156 | −215 |
| | | | | |

2. ಅಡ್ಡಸಾಲಿನಲ್ಲಿ ಕಳೆಯಿರಿ.

1. 326−216= ☐
2. 467−356= ☐
3. 356−153= ☐
4. 428−317= ☐

3. ವಿಸ್ತರಿಸಿ ಬರೆದು ವ್ಯವಕಲನ ಮಾಡಿರಿ

1) 496−267
2) 378−267
3) 365−253
4) 298−157

4. ಮನೆಯಲ್ಲಿ ಅಮ್ಮನೊಂದಿಗೆ ಅಂಗಡಿ ವ್ಯಾಪಾರದ ಆಟ ಆಡಿ:

**ನಿಮ್ಮ ಬಳಿ 100 ರೂ ಇದೆ. ಅಮ್ಮನಿಂದ ಈ ಕೆಳಗೆ ಸೂಚಿಸಿರುವ ತರಕಾರಿ 1 ಕೆ.ಜಿ ಪಡೆದುಕೊಂಡು, ಅಮ್ಮನಿಗೆ ನೀವೆಷ್ಟು ಚಿಲ್ಲರೆ ಪಡೆಯುತ್ತೀರಿ ಎಂಬುದನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆದು ಲೆಕ್ಕ ಮಾಡಿ. ಪಡೆಯುವ ಚಿಲ್ಲರೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರೆಯುವುದು.**

1 ಕೆ ಜಿ ಆಲುಗಡ್ಡೆ– 45 ರೂ ☐

1 ಕೆ ಜಿ ಟೊಮೋಟೊ–30 ರೂ ☐

1 ಕೆ ಜಿ ಈರುಳ್ಳಿ– 35 ರೂ ☐

1 ಕೆ ಜಿ ಬೀನ್ಸ್ –60 ರೂ ☐

1 ಕೆ ಜಿ ಕ್ಯಾರೆಟ್ –50 ☐

5. ಎರಡು ಹಣ್ಣಿನ ಅಂಗಡಿಗಳಲ್ಲಿ ಹಣ್ಣಿನ ಬೆಲೆಯ ವ್ಯತ್ಯಾಸ ತಿಳಿದು ಕಡಿಮೆ ಬೆಲೆ ಇರುವ ಯಾವುದು ಎಂದು ಗುರ್ತಿಸಿ. ವ್ಯವಕಲನ ಲೆಕ್ಕಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಮಾಡುವುದು.

| ರಮೇಶನ ಅಂಗಡಿ | | ಸತೀಶನ ಅಂಗಡಿ | |
|---|---|---|---|
| ಹಣ್ಣಿನ ಹೆಸರು | ಬೆಲೆ | ಹಣ್ಣಿನ ಹೆಸರು | ಬೆಲೆ |
| ಮಾವಿನ ಹಣು | 275 ರೂ | ಮಾವಿನ ಹಣು | 260 ರೂ |
| ಸಪೋಟ ಹಣ್ಣು | 165 ರೂ | ಸಪೋಟ ಹಣ್ಣು | 135 ರೂ |
| ಬಾಳೆ ಹಣ್ಣು | 150 ರೂ | ಬಾಳೆ ಹಣ್ಣು | 140 ರೂ |
| ದ್ರಾಕ್ಷಿ ಹಣು | 175 ರೂ | ದ್ರಾಕ್ಷಿ ಹಣು | 165 ರೂ |
| ಕಿತ್ತಳೆ ಹಣು | 190 ರೂ | ಕಿತ್ತಳೆ ಹಣು | 180 ರೂ |

6. ಲೆಕ್ಕ ಮಾಡಿ ಬರುವ ಉತ್ತರಕ್ಕೆ ಸರಿಯಾದ ಅಕ್ಷರ ಹುಡುಕಿ ಕ್ರಮಬದ್ಧವಾದ ಪದ ರಚಿಸಿ

| | |
|---|---|
| 275−132= | |
| 348−123= | |
| 457−312= | |
| 278−55= | |
| 224−120= | |

| 225 | 124 | 143 | 145 | 243 |
|---|---|---|---|---|
| ದೇ | ರಂ | ವಂ | ಮಾ | ತ |

DIET CHIKKAMAGALURU

## ದಶಕ ಸಹಿತ ವ್ಯವಕಲನ.


**ಸಾಮರ್ಥ್ಯ:–**

1. 0 ಯಿಂದ 99 ರವರಗೆ ಸಂಖ್ಯೆ ಕಟ್ಟು ಬಳಸಿ ದಶಕ ಸಹಿತ ವ್ಯವಕಲನ ಮಾಡುವುದು.
2. ಹೆಚ್ಚು ಬೆಲೆಯ ಸಂಖ್ಯೆಗಳನ್ನು ಕಡಿಮೆ ಬೆಲೆಯ ಸಂಖ್ಯೆಳನ್ನು ದಶಕ ಸಹಿತವಾಗಿ ಕಳೆಯುವುದು.
3. ವಿಸ್ತರಿಸಿ ಬರೆದು ಕಳೆಯುವುದು.

**ಕಲಿಕಾಂಶ.**

1.

  372
–246
―――
  126
―――



**ಮೊದಲಿಗೆ ನೂರರ 3 ಕಟ್ಟುಗಳನ್ನು ಹಾಗೂ ಹತ್ತರ 7 ಕಟ್ಟುಗಳನ್ನು, ಬಿಡಿಯ 2 ಕಡ್ಡಿಗಳನ್ನು ತೆಗೆದುಕೊಳ್ಳುವುದು. ಇದರಲ್ಲಿ 2 ಬಿಡಿ ಕಡ್ಡಿಗಳಿಂದ 6 ಬಿಡಿ ಕಡ್ಡಿಗಳನ್ನು ಕಳೆಯಲು ಆಗದಿದ್ದಾಗ ಹತ್ತರ ಕಟ್ಟಿನಿಂದ ಒಂದನ್ನು ಎರವಲು ಪಡೆದು ಬಿಡಿ ಕಡ್ಡಿಗಳಾಗಿ ಬದಲಿಸಿ ಈಗ ಇರುವ 12 ಕಡ್ಡಿಗಳಿಂದ 6 ಕಡ್ಡಿಗಳನ್ನು ಕಳೆಯುವುದು. ನಂತರ ಹತ್ತರ ಸ್ಥಾನದಲ್ಲಿ ಉಳಿದಿರುವ ಹತ್ತರ ಕಟ್ಟುಗಳಲ್ಲಿ ಎರವಲು ಪಡೆಯುವ ಅಗತ್ಯವಿಲ್ಲ ಹಾಗೂ ನೂರರ ಕಟ್ಟುಗಳಲ್ಲಿ ಸಹ ಎರವಲು ಪಡೆಯುವ ಅಗತ್ಯವಿಲ್ಲ. ಹಾಗೆಯೇ ವ್ಯವಕಲನ ಮಾಡುವುದು. (ಎರವಲು=ದಶಕ).**

**2. ಸ್ಥಾನ ಬೆಲೆಗೆ ಅನುಗುಣವಾಗಿ ಬರೆದುಕೊಂಡು ವಿಸ್ತರಣಾ ರೂಪದಲ್ಲಿ ವ್ಯವಕಲನ ಮಾಡುವುದು.**

| ಸಂಖ್ಯೆಗಳು | ನೂರು | ಹತ್ತು | ಬಿಡಿ |
|---|---|---|---|
| 263 | 200 | 60 | 3 |
| –158 | 100 | 50 | 8 |
| =105 | 100 | 00 | 5 |

ಸಂಖ್ಯೆಗಳನ್ನು ಅವುಗಳ ಸ್ಥಾನ ಬೆಲೆಗೆ ಅನುಗುಣವಾಗಿ ಅವುಗಳ ಸ್ಥಾನ ಕೋಷ್ಠಕದಲ್ಲಿ ಬರೆದು ಕೊಂಡು ಕಳೆಯುವುದು. ಚಿಕ್ಕ ಸಂಖ್ಯೆಯಿಂದ ಕಳೆಯುವ ಸಂದರ್ಭ ಬಂದಾಗ ಎಡ ಪಕ್ಕದ ಸ್ಥಾನದಿಂದ ಎರವಲು ಪಡೆದು ವ್ಯವಕಲನ ಮಾಡುವುದು.


**3. ಕಂಬ ಸಾಲಿನಲ್ಲಿ ಬರೆದುಕೊಂಡು ಕಳೆಯುವ ಲೆಕ್ಕ ಮಾಡುವುದು.**

| | | |
|---|---|---|
| 3—100 | 3—10 | 8 |
| 2 | 5 | 9 |
| 0 | 7 | 9 |

ಹೀಗೆ ಬರೆದುಕೊಂಡು ಎಡ ಪಕ್ಕದ ಸ್ಥಾನದಿಂದ ಎರವಲು ಪಡೆದು ಕೊಂಡು ಕಳೆಯುವುದು.

DIET CHIKKAMAGALURU

4. ಅಡ್ಡ ಸಾಲುಗಳಲ್ಲಿ ಬರೆದು ಕೊಂಡು ಸ್ಥಾನಬೆಲೆಗೆ ಅನುಸಾರವಾಗಿ ವ್ಯವಕಲನ ಮಾಡುವುದು.




ಈಗಾಗಲೇ ಮೇಲಿನ ಚಟುವಟಿಕೆಗಳಲ್ಲಿ ಮಾಡಿರುವ ಹಾಗೆ ಸ್ಥಾನ ಬೆಲೆಗೆ ಅನುಸಾರ ವಾಗಿ ಬರೆದುಕೊಂಡು ಕಳೆಯುವ ಲೆಕ್ಕ ಮಾಡುವುದು.

## ಅಭ್ಯಾಸ ಚಟುವಟಿಕೆ.

1. ಕಳೆಯಿರಿ ನಂತರ ದಾರವನ್ನು ಉತ್ತರದ ಕೀಲಿನೊಂದಿಗೆ ಸೇರಿಸಿ.

| | | | |
|---|---|---|---|
| 387<br>–298 | 416<br>–158 | 295<br>–179 | 158<br>–139 |
| 116 | 022 | 089 | 313 |

2. ಮಾದರಿಯಂತೆ ಕಳಗಿನ ವ್ಯವಕಲನ ಸಮಸ್ಯೆಗಳನ್ನು ಬಿಡಿಸಿರಿ.

| | | | | | |
|---|---|---|---|---|---|
| 456 | 257 | 383 | 158 | 345 | 500 |
| –347 | –148 | –175 | –139 | –297 | –432 |
| 109 | | | | | |

3. ವ್ಯವಕಲನ ಮಾಡಿ ಸರಿ ಉತ್ತರಗಳನ್ನು ಆರಿಸಿ ಬರೆಯಿರಿ.

(ಉತ್ತರಗಳು– 171, 179, 168, 107, 233)

1) 4 7 8 – 2 9 9 = 1 7 9
2) 3 6 5 – 1 9 4 [ ]
3) 2 7 5 – 1 0 7 [ ]
4) 4 0 9 – 1 7 6 [ ]
5) 3 9 2 – 2 8 5 [ ]

4. ಮಾದರಿಯಂತೆ ವಿಸ್ತರಿಸಿ ಬರೆಯಿರಿ

ಮಾದರಿ:–

| |
|---|
| 495= 400+90+5 |
| –367=300+60+7 |
| 128=100+20+8 |

1) 472
–284
______
______

2) 470
–395
______
______

3) 352
–178
______
______

4) 336
–218
______
______

DIET CHIKKAMAGALURU

## ಮೌಲ್ಯಮಾಪನ ಚಟುವಟಿಕೆ

**ಕೆಳಗಿನ ಸಮಸ್ಯೆಗಳನ್ನು ಬಿಡಿಸಿ:**

1. ಹಾಲಿನ ಅಂಗಡಿಯವನು ತನ್ನ ಅಂಗಡಿಯಲ್ಲಿದ್ದ 250 ಲೀ ಹಾಲಿನಲ್ಲಿ 178 ಲೀ ಹಾಲು ಮಾರಿದನು. ಅವನ ಬಳಿ ಉಳಿದ ಹಾಲು ಎಷ್ಟು?

   ಹಾಲಿನ ಅಂಗಡಿಯಲ್ಲಿದ್ದ ಹಾಲು = 250 ಲೀ
   ಮಾರಾಟ ಮಾಡಿದ ಹಾಲು = 178 ಲೀ
   ಅವನ ಬಳಿ ಉಳಿದ ಹಾಲು = ?

2. ರಂಗಣ್ಣ ಎಂಬ ರೈತನು ತನ್ನ ತೋಟದಲ್ಲಿ 476 ತೆಂಗಿನ ಕಾಯಿಗಳನ್ನು ಕಿತ್ತು 247 ತೆಂಗಿನಕಾಯಿಗಳನ್ನು ಮಾರಿದರೆ ಉಳಿದ ತೆಂಗಿನ ಕಾಯಿಗಳು ಎಷ್ಟು?

3. ರಮೇಶನು ತನ್ನ ಹುಟ್ಟುಹಬ್ಬಕಕೆ 357 ಲಾಡುಗಳನ್ನು ಮಾಡಿಸಿದ್ದದನು. ಅವುಗಳಲ್ಲಿ 319 ಲಾಡುಗಳನ್ನು ಅತಿಥಿಗಳಿಗೆ ಹಂಚಿದರೆ ಉಳಿದ ಲಾಡುಗಳು ಎಷ್ಟು?

DIET CHIKKAMAGALURU

## ಮೆಟ್ಟಿಲುಗಳು:– 74–86

## ಸ್ಥಾನಬೆಲೆ ಎಣಿಕೆ ಬರವಣಿಗೆ (500–999)

**ಸಾಮರ್ಥ್ಯ:–** ಬಿಡಿ ಹತ್ತು ನೂರರ ಸ್ಥಾನ ಬೆಲೆಯನ್ನು ಅರಿಯುವುದು.

500 ರಿಂದ 999 ರವರಗೆ ಸ್ಥಾನಬೆಲೆ ಎಣಿಸಿ ಬರೆಯುವುದು.

### ಕಲಿಕಾಂಶ

1. ಮಗು 5 ರ ಸ್ಥಾನಬೆಲೆಯನ್ನು ಅರಿಯುವುದು (ಬೇರೆ ಬೇರೆ ಸ್ಥಾನದಲ್ಲಿ 5 ಬೆಲೆ ಹೇಗೆ ಬದಲಾಗುತ್ತದೆ ಎಂದು ಅರ್ಥ ಮಾಡಿಕೊಳ್ಳಿ.)

| ನೂರು | ಹತ್ತು | ಬಿಡಿ |
|---|---|---|
| | | 5 |

5 – ನಾನು ಬಿಡಿ ಸ್ಥಾದಲ್ಲಿದ್ದರೆ ನನ್ನ ಬೆಲೆ 5 ಆಗುತ್ತದೆ.



| ನೂರು | ಹತ್ತು | ಬಿಡಿ |
|---|---|---|
| | 5 | 0 |

5 – ನಾನು ಹತ್ತರ ಸ್ಥಾದಲ್ಲಿದ್ದರೆ ನನ್ನ ಬೆಲೆ 50 ಆಗುತ್ತದೆ.

| ನೂರು | ಹತ್ತು | ಬಿಡಿ |
|---|---|---|
| 5 | 0 | 0 |


5 –ನಾನು ನೂರರ ಸ್ಥಾದಲ್ಲಿದ್ದರೆ ನನ್ನ ಬೆಲೆ 500 ಆಗುತ್ತದೆ.

2. ಮಾದರಿಯನ್ನು ನೋಡಿ ಪೋಷಕರ ಸಹಾಯದಿಂದ ಅರ್ಥ ಮಾಡಿಕೊಳ್ಳಿ.

| ನೂರು | ಹತ್ತು | ಬಿಡಿಗಳು |
|---|---|---|
|  |  |  |
| 100ರ 6 ಕಟ್ಟುಗಳು<br>600 | 10ರ 2 ಕಟ್ಟುಗಳು<br>20 | 8 ಬಿಡಿಗಳು<br>8    628 |

CHIKKAMAGALURU

### 3. ಮಣಿಕಟ್ಟಿನ ಸಹಾಯದಿಂದ  ಸಂಖ್ಯೆಯ ಎಣಿಕೆ ಮಾಡುವುದು:




ಎಣಿಕೆ ಮಾಡುವ ಕ್ರಮ– 4 ನೂರುಗಳು=400, 2 ಹತ್ತುಗಳು=20 ಮತ್ತು 3 ಬಿಡಿಗಳು, ಒಟ್ಟಾರೆ=423.

### 4. ಸ್ಥಾನಬೆಲೆ ಕೋಷ್ಠಕದಲ್ಲಿ ಅಂಕಿಗಳ ಬರೆದುಕೊಂಡು ಸಂಖ್ಯೆಗಳನ್ನು ಎಣಿಕೆ ಮಾಡುವುದು.

| ನೂರು | ಹತ್ತು | ಬಿಡಿ | ಸಂಖ್ಯೆಗಳು | ವಿಸ್ತರಣೆ |
|---|---|---|---|---|
| 7 | 3 | 6 | 736 | 700+30+6 |
| 8 | 7 | 4 | 74 | 800+40+4 |
| 6 | 5 | 2 | 652 | 600+50+2 |
| 9 | 7 | 6 | 976 | 900+70+6 |
| 5 | 4 | 8 | 548 | 500+40+8 |

### 5. ಈ ಕೆಳಗಿನ ಸಂಖ್ಯೆಗಳನ್ನು ನಿಮ್ಮ ನೋಟ್ ಪುಸ್ತಕಗಳಲ್ಲಿ ಬರೆದುಕೊಂಡು ಎಣಿಕೆ ಮಾಡುವುದು.

100 200 300 400

600 700 800 900

DIET CHIKKAMAGALURU

## ಅಭ್ಯಾಸ ಚಟುವಟಿಕೆ

1. ಖಾಲಿ ಬಿಟ್ಟ ಜಾಗಗಳಲ್ಲಿ ಸರಿಯಾದ ಸಂಖ್ಯೆಗಳನ್ನು ಬರೆಯಿರಿ
ಮಾದರಿಯನ್ನು ಮೇಲ್ಭಾಗದಲ್ಲಿ ನೀಡಲಾಗಿದೆ.

| | | | | | | | | | |
|---|---|---|---|---|---|---|---|---|---|
| 501 | 502 | 503 | 504 | 505 | 506 | 507 | '508 | 509 | 510 |
| 601 | | | | | | | | | |
| 821 | | | | | | | | | 830 |
| 619 | 620 | | | | | 625 | | | |
| 735 | | | 738 | | | | | | |
| 899 | 900 | | | | | | | 907 | |
| 515 | | | | 519 | | | | | |
| 985 | | | | | | 991 | | | |

2. ಸ್ಥಾನಬೆಲೆ ಕೋಷ್ಟಕದಲ್ಲಿ ಬರೆದು ವಿಸ್ತರಿಸಿ ಬೆರೆಯಿರಿ.

| ಸಂಖ್ಯೆಗಳು | ನೂರು | ಹತ್ತು | ಬಿಡಿ | ವಿಸ್ತೃತ ರೂಪ |
|---|---|---|---|---|
| 684 | 6 | 8 | 4 | 600+80+4 |
| 927 | | | | |
| 870 | | | | |
| 735 | | | | |
| 595 | | | | |

## ಮೌಲ್ಯಮಾಪನ ಚಟುವಟಿಕೆ

1. ಈ ಕೆಳಗೆ ವಿಸ್ತರಿಸಿ ಬರೆದ ಸಂಖ್ಯೆಗಳನ್ನು ಸ್ಥಾನಬೆಲೆ ಪಟ್ಟಿಯಲ್ಲಿ ಬರೆಯಿರಿ.

| ವಿಸ್ತರಣೆ | ನೂರು | ಹತ್ತು | ಬಿಡಿ | ಸಂಖ್ಯೆಗಳು |
|---|---|---|---|---|
| 900+70+3 | | | | |
| 500+80+0 | | | | |
| 700+00+5 | | | | |
| 600+30+9 | | | | |
| 800+20+7 | | | | |

2. ವೃತ್ತ ಹಾಕಿರುವ ಅಂಕಿಗಳ ಸ್ಥಾನ ಮತ್ತು ಸ್ಥಾನಬೆಲೆಯನ್ನು ಬರೆಯಿರಿ.

| ಸಂಖ್ಯೆಗಳು | ಸ್ಥಾನ | ಸ್ಥಾನಬೆಲೆ |
|---|---|---|
| 7 (3) 8 | | |
| (5) 7 2 | | |
| 6 (0) 7 | | |
| (5) 4 1 | | |
| 5 6 (8) | | |

3. ಕೆಳಗಿನ ಸಂಖ್ಯೆಗಳನ್ನು ಸ್ಥಾನಬೆಲೆಗೆ ಅನುಸಾರವಾಗಿ ವಿಸ್ತರಿಸಿ ಬರೆಯಿರಿ.

1. 752=
2. 990=
3. 634=
4. 875=
5. 576=

DIET CHIKKAMAGALURU

## ಕಲಿಕಾಂಶ

**ಸಾಮರ್ಥ್ಯ:- ಸ್ಥಾನ ಬೆಲೆಯನ್ನು ಗುರುತಿಸುವುದರ ಜೊತೆಗೆ ಸಂಖ್ಯೆಗಳನ್ನು ಪದಗಳಲ್ಲಿ ಮತ್ತು ಪದಗಳನ್ನು ಸಂಖ್ಯೆಗಳಲ್ಲಿ ಬರೆಯುವುದು.**

**ಚಟುವಟಿಕೆ:1- ಮಾದರಿಯಂತೆ ಸಂಖ್ಯಾ ಪದಗಳನ್ನು ಬರೆಯಲು ಪ್ರಯತ್ನಿಸು. ಅಗತ್ಯವಿದ್ದಲ್ಲಿ ನಿಮ್ಮ ಅಕ್ಕ, ಅಣ್ಣ ಇವರ ಸಹಾಯ ಪಡೆಯಬಹುದು.**

1) 501–ಐದು ನೂರಾ ಒಂದು
2) 502–ಐದು ನೂರಾ ಎರಡು
3) 503–ಐದು ನೂರಾ ಮೂರು
4) 560– ಐದು ನೂರಾ ಅರವತ್ತು
5) 601– ಆರು ನೂರಾ ಒಂದು
6) 602–ಆರು ನೂರಾ ಎರಡು
7) 650–ಆರು ನೂರಾ ಐವತ್ತು
8) 801–ಎಂಟು ನೂರಾ ಒಂದು
9) 701– ಏಳು ನೂರಾ ಒಂದು
10) 702–ಏಳು ನೂರಾ ಎರಡು
11) 750–ಏಳು ನೂರಾ ಐವತ್ತು
12) 900–ಒಂಭೈನೂರು

**ಚಟುವಟಿಕೆ:2 ಸ್ಥಾನ ಬೆಲೆಗಳನ್ನು ವಿಸ್ತರಿಸುವ ಮೂಲಕ ಸುಲಭವಾಗಿ ಪದಗಳಲ್ಲಿ ಬರೆಯುವುದು**

543=500+40+3–––ಐದುನೂರು+ನಲವತ್ತು+ಮೂರು=ಐನೂರಾ ನಲವತ್ತ ಮೂರು.

637=––––––––––––––––––––––––––––––––––––––––––––––.

498=––––––––––––––––––––––––––––––––––––––––––––––.

625=––––––––––––––––––––––––––––––––––––––––––––––.

**ಚಟುವಟಿಕೆ:3 ಮಾದರಿಯಂತೆ ಕೋಷ್ಟಕದಲ್ಲಿ ಬರೆದು ಸ್ಥಾನಬೆಲೆಯೊಂದಿಗೆ ಪದಗಳಲ್ಲಿ ಬರೆಯಿರಿ:**

| ಕ್ರ.ಸಂ | ಸಂಖ್ಯೆ | ನೂರು | ಹತ್ತು | ಬಿಡಿ | ಪದಗಳಲ್ಲಿ |
|---|---|---|---|---|---|
| 1 | 647 | 6 | 4 | 7 | |
| | | ಆರು ನೂರ | ನಲವತ್ತು | ಏಳು | ಆರು ನೂರಾ ನಲವತ್ತೇಳು |
| 2 | 909 | | | | |
| | | | | | |
| 3 | 828 | | | | |
| | | | | | |
| 4 | 792 | | | | |
| | | | | | |

DIET CHIKKAMAGALURU

## ಪುನರ್ಬಲನ ಚಟುವಟಿಕೆ

**ಚಟುವಟಿಕೆ: ಮಾದರಿಯಂತೆ ಈ ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆದು ಅಭ್ಯಾಸ ಮಾಡಿ:**

**ಮಾದರಿ–611 ರಿಂದ 615 ರವರೆಗೆ ಬರೆಯಿರಿ.**

611–ಆರುನೂರಾ ಹನ್ನೊಂದು,

612– ಆರುನೂರಾ ಹನ್ನೆರಡು,

613– ಆರುನೂರಾ ಹದಿಮೂರು

614– ಆರುನೂರಾ ಹದಿನಾಲ್ಕು

615– ಆರುನೂರಾ ಹದಿನೈದು.

1) 701 ರಿಂದ 750ರವರೆಗೆ

2) 851 ರಿಂದ 951 ರವರೆಗೆ

3) 551 ರಿಂದ 600ರವರೆಗೆ

4) 951 ರಿಂದ 999ರವರೆಗೆ

DIET CHIKKAMAGALURU

1. **ಗೆರೆ ಎಳೆದಿರುವ ಅಂಕಿಯ ಸ್ಥಾನಬೆಲೆಯನ್ನು ಹೊಂದಿಸಿ:**

| | |
|---|---|
| 549 | ಐದು |
| 696 | ನಲವತ್ತು |
| 703 | ಆರುನೂರು |
| 825 | ಸೊನ್ನೆ |

2. **ಯೋಚಿಸು–ಉತ್ತರಿಸಿ:**

| | |
|---|---|
| ____ – ಐದುನೂರ ಮೂವತ್ತೈದು | 744 – ____ |
| 536 – ____ | ____ – ಏಳುನೂರಾ ಎಪ್ಪತ್ತೈದು |
| 537 – ____ | 776 – ____ |
| 538 – ____ | 777 – ____ |
| 539 – ____ | ____ – ಎಂಟು ನೂರು |
| 540 – ____ | 801 – ____ |
| ____ –ಆರುನೂರ ನಲವತ್ತೊಂದು | 802 – ____ |
| 642 – ____ | 803 – ____ |
| 643 – ____ | ____ – ಎಂಟುನೂರಾ ಎಪ್ಪತ್ತೆರಡು |
| 644 – ____ | 823 – ____ |

CHIKKAMAGALURU

**3. ಮೀನು ಗಾಳ ಚಟುವಟಿಕೆ: ಸೂಚನೆ: ಸಂಖ್ಯೆಯಲ್ಲಿದ್ದರೆ ಪದಗಳಲ್ಲಿ ಬರೆಯಿರಿ, ಪದಗಳಲ್ಲಿದ್ದರೆ ಸಂಖ್ಯೆಯಲ್ಲಿ ಬರೆಯಿರಿ.**

